**<u>ಅಸಲು ದಾವಾ ಸಂಖ್ಯೆ: 115/2023</u>** ಡಿ.ಡಬ್ಲ್ಯೂ:- 2

ದಿನಾಂಕಃ **10.10.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ:- ಪ್ರತಿವಾದಿ ಪರ ವಕೀಲರಿಂದ:-</u>

ನಾನು ಈ ದಾವೆಯಲ್ಲಿ ಪ್ರತಿವಾದಿಯ ಪರ ಸಾಕ್ಷಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದಾಗಿದೆ.

<u>ಪಾಟೀ ಸವಾಲುಃ ವಾದಿಯ ಪರ ವಕೀಲರಿಂದಃ</u>

ಹನುಮಂತಪ್ಪ ಬಿನ್ ಶೇಷಗಿರಿಯಪ್ಪರವರಿಗೆ ಒಬ್ಬನೇ ಮಗ ಅಂದರೆ ಸಂತೋಷ. ವಾದಿಯ ತಂದೆ ಹನುಮಂತಪ್ಪನಿಗೆ 3 ಜನ ಮಕ್ಕಳು ಅಂದರೆ ಶೇಷಗಿರಿಯಪ್ಪ, ಹನುಮಂತಪ್ಪ ಮತ್ತು ಸಿದ್ದಪ್ಪ. ಹನುಮಂತಪ್ಪನಿಗೆ ಹೆಣ್ಣು ಮಕ್ಕಳು ಇರುತ್ತಾರೆ ಆದರೆ ಅವರ ಹೆಸರು ನನಗೆ ನೆನಪಿಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ನಡೆದಂತಹ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಆಸ್ತಿಗಳ ಬಗ್ಗೆ ಗೊತ್ತು. ಸಾಕ್ಷಿಗೆ ದಾವಾ ಆಸ್ತಿಗಳು ಹನುಮಂತಪ್ಪನ ಕುಟುಂಬಕ್ಕೆ ಸೇರಿದ ಆಸ್ತಿಗಳು ಎಂದರೆ ಸಾಕ್ಷಿಯು ದಾವಾ ಐಟಂ ನಂ.1 ರ ಆಸ್ತಿಯು ಹನುಮಂತಪ್ಪರವರ ಆಸ್ತಿ ಮತ್ತು ದಾವಾ ಐಟಂ ನಂ.2 ರ ಆಸ್ತಿ ಸರೋಜಮ್ಮರವರಿಗೆ ಸೇರಿದ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ಹನುಮಂತಪ್ಪ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಹನುಮಂತಪ್ಪ ತಮ್ಮ ಜೀವಿತಾವಧಿಯಲ್ಲಿ ಸಾಗುವಳಿ ಮಾಡುತ್ತಿದ್ದರು ಅವರ ಮರಣದ ನಂತರ ವಾದಿ ಮತ್ತು ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಯು ಸಹ ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಯು ಸಹ ಒಟ್ಟು ಕುಟುಂಬದ ಪರವಾಗಿ 1 ನೇ ಪ್ರತಿವಾದಿಗೆ ಮಂಜೂರಾದ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ

ಆಸ್ತಿ ಆಗಿದ್ದರೂ ಸಹ 1 ಮತ್ತು 2 ನೇ ಪ್ರತಿವಾದಿಯ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳ ಮಾತುಕೇಳಿಕೊಂಡು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.